**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.**

**ಇ.ಸಿ.ಎ. ನಂ. 07/2019.**

**ಪಿ ಡಬ್ಲ್ಯೂಃ 1**

**ದಿನಾಂಕಃ 23-06-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಆರ್.ಎಸ್.ಎಸ್. ವಕೀಲರಿಂದಃ**

ನಾನು ಗೂಡ್ಸ ವಾಹನದ ಮಾಲೀಕ ಇರುತ್ತೇನೆ ಎಂದರೆ ಸರಿ. ಈ ಅಪಘಾತದಲ್ಲಿ ನನ್ನ ವಾಹನ ಪಾಲ್ಗೊಂಡಿಲ್ಲ ಎಂದರೆ ಸರಿ. ಮೃತ ವ್ಯಕ್ತಿ ನಮ್ಮ ವಾಹನದಲ್ಲಿ ಯಾವುದೇ ಹಮಾಲಿ/ಕೂಲಿ ಕೆಲಸ ಮಾಡುತ್ತಿರಲಿಲ್ಲ. ಆ ವ್ಯಕ್ತಿಯ ಸಾವಿಗೂ ಮತ್ತು ನಮ್ಮ ವಾಹನಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಪೋಲಿಸರು ಯಾವುದೋ ಒಂದು ವಾಹನ ಮೃತನಿಗೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿದ್ದಾರೆ ಎಂದು ಪೋಲಿಸರು ವರದಿ ಸಲ್ಲಿಸಿದ್ದಾರೆ ಎಂದರೆ ಸರಿ. ನನ್ನ ಮತ್ತು ಮೃತ ವ್ಯಕ್ತಿಯ ಮದ್ಯೆ ಯಾವುದೇ ಮಾಲೀಕ ಮತ್ತು ಕಾರ್ಮಿಕ ಸಂಬಂಧ ಇಲ್ಲ ಎಂದರೆ ಸರಿ. ನಾನು ಮೃತ ವ್ಯಕ್ತಿಗೆ ರೂ.15,000/- ಸಂಬಳ ಕೊಡುತ್ತಿದ್ದೆ ಮತ್ತು ರೂ.150/- ಭತ್ಯೆ ಕೊಡುತ್ತಿದ್ದೆ ಅಂತಾ ಅರ್ಜಿದಾರರು ಹೇಳುವುದು ಸುಳ್ಳು ಇರುತ್ತದೆ. ಈ ಎಲ್ಲ ಕಾರಣಗಳಿಂದ ನಾವು ಮತ್ತು ಕಂಪನಿಯವರು ಯಾವುದೇ ಪರಿಹಾರ ನೀಡಲು ಬಾದ್ಯಸ್ತರು ಇರುವುದಿಲ್ಲ ಎಂದರೆ ಸರಿ.

ಅರ್ಜಿದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.